ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನ ಕದ್ರಿ ಪೋಲೀಸ್ ಠಾಣೆ ಬಾಡಿಗೆ ಕಟ್ಟಡದಲ್ಲಿ ಇದ್ದು ಸಿಬ್ಬಂದಿ ಕಷ್ಟದಿಂದ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) 1974ರಲ್ಲಿ ಪೋಲೀಸ್ ಸ್ಟೇಷನ್‌ಗಳಿಗೆ ಸ್ಥಳ ಮಂಜೂರು ಆದರೂ ಯಾವುದೇ ರೀತಿಯ ಕಟ್ಟಡ ಅನುದಾನ ಸಿಗದೇ ತೊಂದರೆ ಆಗಿರುವುದರಿಂದ ತಕ್ಷಣ ಅನುಷ್ಠಾನಕ್ಕೆ ಬರುವಂತೆ ಕಟ್ಟಡಗಳಿಗೆ ಸಂಬಂಧಪಟ್ಟ ಕಟ್ಟಡ ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕೆ ಯಾವುದಾದರೂ ತೊಂದರೆಗಳು ಇವೆಯೇ?

ಇ) ಇಲ್ಲದಿದ್ದಲ್ಲಿ ಯಾವಾಗ ಹಣ ಬಿಡುಗಡೆ ಮಾಡಲಾಗುವುದು.

ಈ) ಶಕ್ತಿನಗರದ 98 ಪೋಲೀಸ್ ವಸತಿ ಗೃಹಗಳ ಹಾಗೂ ಮಂಗಳೂರಿನಲ್ಲಿರುವ ಪೊಲೀಸ್ ವಸತಿ ಗೃಹಗಳು ತಕ್ಷಣ ದುರಸ್ತಿ ಮಾಡಲು ಸರಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು):

ಅ) ಹೌದು.

ಆ) 1993-94ರಲ್ಲಿ ಈ ಸ್ಟೇಷನ್ನಿಗೆ 8.5 ಲಕ್ಷ ರೂಗಳ ವೆಚ್ಚದಲ್ಲಿ ಒಂದು ಹೊಸ ಕಟ್ಟಡ ನಿರ್ಮಾಣ ಮಾಡಲು ಆಧ್ಯತಾ ಪಟ್ಟಿಯಲ್ಲಿ ಸೇರಿಸಿ ಕರ್ನಾಟಕ ರಾಜ್ಯ ಪೋಲಿಸ್ ವಸತಿ ನಿಗಮಕ್ಕೆ ವಹಿಸಲಾಗಿದೆ. ಆದರೆ ವಸತಿ ನಿಗಮಕ್ಕೆ ಹಣಕಾಸಿನ ಮುಗ್ಗಟ್ಟಿನಿಂದಾಗಿ ಕೆಲಸ ಪ್ರಾರಂಭಿಸಲು ಸಾಧ್ಯವಾಗಿಲ್ಲ. ನಿಗಮವು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಸಾಧ್ಯವಾದರೆ ಈ ಕಟ್ಟಡವನ್ನೂ ಕೈಗೆತ್ತಿಕೊಳ್ಳಲಾಗುವುದು.

ಇ) ಮೇಲಿನಂತೆ.

ಈ) ಶಕ್ತಿನಗರದ 98 ಪೊಲೀಸ್ ವಸತಿ ಗೃಹಗಳ ಬಗೆಗೆ ಯಾವದೇ ಗಂಭೀರವಾದ ಸಮಸ್ಯೆ ಅಥವಾ ದೂರು ಘಟಕಾಧಿಕಾರಿಗಳಿಂದ (ಎಸ್.ಪಿ.ಮಂಗಳೂರು) ವರದಿ ಮಾಡಿಲ್ಲ. ಪ್ರಸಕ್ತ ಸಾಲಿನಲ್ಲಿ ಈ ಘಟಕಕ್ಕೆ 5 ಲಕ್ಷ ರೂ ವಸತಿ ಗೃಹಗಳ ರಿಪೇರಿಗೆ ಬಿಡುಗಡೆ ಮಾಡಲಾಗಿದ್ದು ಆಧ್ಯತೆಯ ಆಧಾರದ ಮೇಲೆ ರಿಪೇರಿ ಮಾಡಬೇಕಾದ ಗೃಹಗಳ ದುರಸ್ತಿಯನ್ನು ಘಟಕಾಧಿಕಾರಿಗಳೇ ಮಾಡಿಸುತ್ತಾರೆ.

ವಿಷಯ: ಕೈದಿಗಳಿಗೆ ಪೋಲೀಸ್ ಎಸ್ಕಾರ್ಟ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1647 (2158)

ಶ್ರೀ ಎಸ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಕಾರಾಗೃಹಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೈದಿಗಳನ್ನು ಅನಾರೋಗ್ಯದ ಸಂದರ್ಭಗಳಲ್ಲಿ ಆಸ್ಪತ್ರೆಗೆ ಕೊಂಡೊಯ್ಯಲು ಪೊಲೀಸ್ ಎಸ್ಕಾರ್ಟ್ ಸರಿಯಾಗಿ ಸಿಗುವಂತೆ ವ್ಯವಸ್ಥೆ ಮಾಡಲಾಗುವುದೆ?

ಆ) ಸಬ್ ಜೈಲಿನಲ್ಲಿ ಎಷ್ಟು ರೈಫಲ್‌ಗಳಿವೆ, ಎಷ್ಟು ಪಿಸ್ತೂಲುಗಳಿವೆ, ಅವುಗಳು ಸುಸ್ಥಿತಿಯಲ್ಲಿವೆಯೇ?

ಇ) ಸಿಬ್ಬಂದಿಗಳ ವಸತಿಗೃಹ ತೀರ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇದನ್ನು ಸುಧಾರಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಕಾರಾಗೃಹಗಳ ರಾಜ್ಯ ಸಚಿವರು):-

ಅ) ಸರಿಯಾದ ವ್ಯವಸ್ಥೆ ಇದೆ.

ಆ) ಸಬ್ ಜೈಲುಗಳಲ್ಲಿ ರೈಫಲ್ ಹಾಗೂ ಪಿಸ್ತೂಲುಗಳಿರುವುದಿಲ್ಲ.

ಇ) ಸಿಬ್ಬಂದಿ ವಸತಿ ಗೃಹಗಳು ವಾಸಕ್ಕೆ ಯೋಗ್ಯವಾಗಿವೆ.

ವಿಷಯ: ಸರ್ಕಾರಿ ನೌಕರರ ವರ್ಗಾವಣೆಗಳ ಮಾರ್ಗಸೂಚಿಯ ಜಾರಿಗೆ ಒತ್ತಾಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1649 (659)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ನೌಕರರ ವರ್ಗಾವಣೆ ಬಗ್ಗೆ 1995-96ರ ಸಾಲಿನಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾರ್ಗಸೂಚನೆಗಳನ್ನು ದಿನಾಂಕ 28-4-1995ರಂದು ಜಾರಿಗೊಳಿಸಿದ್ದು ನಿಜವೇ?

ಆ) ಈ ಆದೇಶದಲ್ಲಿ ಇರುವಂತೆ ವರ್ಗಾವಣೆಯನ್ನು ಯಾವ ತಿಂಗಳೊಳಗೆ ಪೂರೈಸಬೇಕಾಗಿತ್ತು. ಹಾಗೂ ಈ ಅವಧಿಯೊಳಗೆ ವರ್ಗಾವಣೆ ಪೂರೈಸಲಾಗಿದೆಯೇ?

ಇ) 'ಎ' ವರ್ಗದ ಅಧಿಕಾರಿಗಳನ್ನು ಸ್ವಂತ ಜಿಲ್ಲೆಗೆ ವರ್ಗಾಯಿಸಬಾರದೆಂದು ಪ್ರತಿಬಂಧವಿದ್ದರೂ 'ಎ' ವರ್ಗದ ಅಧಿಕಾರಿಗಳನ್ನು ಸ್ವಂತ ಜಿಲ್ಲೆಗೆ ವರ್ಗಾಯಿಸಲಾಗಿದೆ ಎಂಬ ದೂರು ಸರ್ಕಾರದವರಿಗೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು):-

ಅ) ಹೌದು.

ಆ) ಮೇ ತಿಂಗಳಲ್ಲಿ ಪೂರೈಸಬೇಕಾಗಿತ್ತು. ತದನಂತರ ಒಂದು ಸುತ್ತೋಲೆಯನ್ನು ಹೊರಡಿಸಿ ವರ್ಗಾವಣೆಗಳನ್ನು ದಿನಾಂಕ: 15-6-1995ರ ನಂತರ ಮಾಡತಕ್ಕದ್ದಲ್ಲವೆಂದು ಸೂಚನೆಗಳನ್ನು ನೀಡಲಾಯಿತು. ಈ ಅವಧಿಯ ನಂತರ ವರ್ಗಾವಣೆಗಳನ್ನು ಮಾಡಬೇಕಾದಲ್ಲಿ ಮುಖ್ಯಮಂತ್ರಿಗಳ ಅನುಮೋದನೆಯನ್ನು ಪಡೆದು ಮಾಡಬಹುದಾಗಿದೆ.

ಇ) ಬಂದಿಲ್ಲ.

ಈ) ಉದ್ಭವಿಸುವುದಿಲ್ಲ.

ಅಧ್ಯಕ್ಷರು: ಉತ್ತರಗಳನ್ನು ಮಂಡಿಸಲಾಗಿದೆ.

ಪ್ರಕಟಣೆ

ಅಧ್ಯಕ್ಷರು: ದಿನಾಂಕ 31ನೇ ಆಗಸ್ಟ್ 1995ರಂದು ಪ್ರಶ್ನೋತ್ತರ ನಡೆಯದ ಕಾರಣ ಸದನದಲ್ಲಿ ಉತ್ತರಿಸುವ 12ನೇ ಪಟ್ಟಿಯಲ್ಲಿರುವ 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ ಹತ್ತನೇ ಪಟ್ಟಿಯಲ್ಲಿರುವ 98 ಪ್ರಶ್ನೆಗಳ ಪೈಕಿ 58 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದಿಡುತ್ತೇನೆ.